**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,ರೋಣ**

ಸಿ ಸಿ ನಂಬರ :213/2023

CW-4 PW-3

| | |
|---|---|
| ಹೆಸರು | :ಪರಶುರಾಮ ರಾಠೋಡ |
| ತಂದೆಯ ಹೆಸರು | : ಈರಪ್ಪ |
| ವಯಸ್ಸು | : 34 ವರ್ಷ |
| ಉದ್ಯೋಗ | : ಅಬಕಾರಿ ಪೇದೆ, ರೋಣ ವಲಯ |
| ವಾಸಸ್ಥಳ | : ರೋಣ |

---

(ಈ ದಿವಸ ದಿನಾಂಕ 07.01.2026 ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ನಾನು 05.09.2019 ರಿಂದ ಇಲ್ಲಿಯವರೆಗೆ ರೋಣ ವಲಯ ಕಚೇರಿಯಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ21.11.2020 ರಂದು ಬೆಳಿಗ್ಗೆ 09.30 ಗೆಂಟೆಗೆ, ಚಾಸಾ.5 ಹಾಗೂ ನಾನು ಸೇರಿಕೊಂಡು ಗಜೇಂದ್ರಗಡ ತಾಲೂಕಿನ ಬೆವಿನಕಟ್ಟೆಯ ಗ್ರಾಮದಲ್ಲಿ ಗಸ್ತು ನಿರ್ವಹಿಸುತ್ತಿದ್ದಾಗ ರುದ್ರಾಪುರದ ಗ್ರಾಮದ ತುಕ್ಕಪ್ಪ ಚಂದ್ರಪ್ಪ ರಾಠೋಡ ರವರು ತನ್ನ ವಾಸದ ಮನೆಯಲ್ಲಿ ಅಕ್ರಮವಾಗಿ ಕಳ್ಳಬಟ್ಟಿ ಸಾರಾಯಿಯಲ್ಲಿ ಸಂಗ್ರಹಿಸಿ ಮಾರಾಟ ಮಾಡುತ್ತಿದ್ದಾರೆ ಎಂದು ಚಾಸಾ.1 ರವರಿಗೆ ಮಾಹಿತಿ ಬಂದಿದ್ದು ನಂತರ ಬೇವಿನಕಟ್ಟಿ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಹೋಗಿ ಇಬ್ಬರು ಪಂಚರನ್ನು ಕರೆದುಕೊಂಡು ಮಾಹಿತಿ ಬಂದ ಸ್ಥಳದ ರುದ್ರಾಪುರದ ಗ್ರಾಮದ ತುಕ್ಕಪ್ಪ ರಾಠೋಡ ಮನೆಯ ಹತ್ತಿರ ಬೆಳಿಗ್ಗೆ 10 ಗಂಟೆಗೆ ಹೋೀಗಿದ್ದು, ಪಂಚರ ಸಮಕ್ಷಮ ಶೋದನ ಸಮಚಿತ ಆಧಾರವನ್ನು ತಯಾರಿಸಿ ಸದರಿ ಮನೆಯನ್ನು ಪರಿಶೀಲನೆ ಮಾಡಲಾಗಿ ಮನೆಯ ಎಡಬಾಗದಲ್ಲಿ ಒಂದು 2 ಲೀಟರನ ಪ್ಲಾಸ್ಟಿಕ ಬಾಟಲಿನಲ್ಲಿ ಯಾವುದೋ ಒಂದು ದ್ರವ ಇರುವುದು ಕಂಡು ಬಂದಿರುತ್ತದೆ. ನಂತರ ಪಂಚರ ಸಮಕ್ಷಮ ಸದರಿ ಬಾಟಲಿನ ಬಾಯಿ ಬಿಚ್ಚಿ ನೋಡಲಾಗಿ ಅದರಲ್ಲಿ ಉಗ್ರ ಘಾಟು ವಾಸನೆ ಕಂಡುಬಂದಿರುತ್ತದೆ. ಅದನ್ನು ನಮ್ಮ ಅಧಿಕಾರಿಗಳು ಕಳ್ಳಬಟ್ಟಿ ಸಾರಾಯಿ ಎಂದು ಖಚಿತಪಡಿಸಿಕೊಂಡಿದ್ದು, ಅದರಲ್ಲಿ ಸುಮಾರು ಒಂದೂವರೆ ಲೀಟರ್ ಕಳ್ಳಬಟ್ಟಿ ಸಾರಾಯಿ ಇರುವುದು ಕಂಡುಬಂದಿರುತ್ತದೆ. ನಂತರ ಚಾಸಾ.1 ರವರು ಸದರಿ ಮನೆಯಲ್ಲಿ ಇದ್ದ ವ್ಯಕ್ತಿಯನ್ನು ವಿಚಾರಿಸಲಾಗಿ ಆತನ ತನ್ನ ಹೆಸರು ತುಕ್ಕಪ್ಪ ಊರ್ಫ ಪೀರಪ್ಪ ತಂದೆ ಚಂದ್ರಪ್ಪ ರಾಠೋಡ ಎಂದು ತಿಳಿಸಿದ್ದು, ಸದರಿ ಸಾರಾಯಿಯನ್ನು ಮಾರಾಟಾದ ಉದ್ದೇಶಕ್ಕಾಗಿ

ಸಂಗ್ರಹಿಸಿ ಇಟ್ಟಿರುವುದಾಗಿ ತಿಳಿಸಿರುತ್ತಾನೆ. ನಂತರ ಚಾಸಾ.1 ರವರು ಆರೋಪಿಯನ್ನು ದಸ್ತಗಿರಿ ಮಾಡಿರುತ್ತಾರೆ. ಮುದ್ದೆ ಮಾಲನ್ನು ಜಪ್ತು ಪಡಿಸಿಕೊಂಡು ಅದೇ ಬಾಟಲಿನಲ್ಲಿ ಸಂಪೂರ್ಣ ಮುದ್ದೆ ಮಾಡಲು ರಾಸಾಯನಿಕ ಪರೀಕ್ಷೆಗಾಗಿ ತೆಗೆದಿರಿಸಿ ಅಧಿಕಾರಿಗಳು ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಲಾಗಿರುತ್ತದೆ. ಮಾದರಿ ಸೀಲ್ ಪತ್ರವನ್ನು ತಯಾರಿಸಲಾಗಿರುತ್ತದೆ. ಸ್ಥಳದಲ್ಲಿಯೇ ಬೆಳಿಗ್ಗೆ 10 ಗಂಟೆಯಿಂದ 11 ಗಂಟೆಯವರೆಗೆ ಪಂಚನಾಮೆಯನ್ನು ಬರೆಯಲಾಗಿರುತ್ತದೆ. ಆ ಕುರಿತು ನಾನು ದಿನಾಂಕಃ 09.12.2022 ರಂದು ತನಿಖಾಧಿಕಾರಿಗಳ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ಹಂತದಲ್ಲಿ ಆರೋಪಿಯ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ಆವರ ಪರ ವಕೀಲರು ತಿಳಿಸಿರುವರು. ಸಾಕ್ಷಿಯು 2 ಲೀಟರಿನ ಒಂದು ಹಸಿರು ಬಣ್ಣದ ಪ್ಲಾಸ್ಟಿಕ ಬಾಟಲ್ ಅನ್ನು ನೋಡಿ ಗುರುತಿಸಿದ್ದು, ಅದನ್ನು ಮುದ್ದೆ ಮಾಲು 1 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಆರೋಪಿಯ ಪರ ವಕೀಲರಿಂದ</u>**

ಚಾಸಾ.1 ರವರಿಗೆ ಯಾವುದೇ ಮಾಹಿತಿ ಬಂದಿಲ್ಲ, ನಾವು ಪಂಚರ ಸಮಕ್ಷಮ ಯಾವುದೇ ದಾಳಿಗೆ ಹೋಗಿಲ್ಲ, ದಾಳಿನಡೆಸಿ ಯಾವುದೇ ವಸ್ತುವನ್ನು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ. ಸರಿ ಇದೆ.

(ಹುಲುಗಪ್ಪ ಡಿ.)

ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ಗಜೇಂದ್ರಗಡ.